# ಸಮದರ್ಶನ

ನಮ್ಮದು ಸರ್ವದಾ ಭೇದಬುದ್ಧಿಯೇ. ನಾವು ಇದನ್ನೇ ಸಾಧನವಾಗಿ ಬಳಸಿಕೊಂಡು ಭೇದ ಪ್ರಪಂಚದಲ್ಲಿಯೇ ಬದುಕುತ್ತಿರುತ್ತೇವೆ. ಇದು ಅತ್ಯಂತ ರುಚಿಕರವೇನೊ ಹೌದು. ಆದರೆ, ಇಂಥ ಭೇದಬುದ್ಧಿಗಳಿಂದಾಗಿ ನಾವು ತಾರತಮ್ಯ ಮಾಡಿಕೊಳ್ಳುತ್ತಿರುತ್ತೇವೆ. ಹೀಗಾಗಿ, ನಮಗೆ 'ಸಮದರ್ಶನ' ಕಾಣಸಿಗುವುದಿಲ್ಲ. ನಮ್ಮೊಳಗೆ ಅಸಮತೆಯೇ ತುಂಬಿರುವಾಗ 'ಸಮತೆ' ಕಾಣಿಸಿಕೊಳ್ಳುವುದಾದರೂ ಹೇಗೆ? ಇದು ಸಾಮಾನ್ಯ ವ್ಯಕ್ತಿಯಿಂದ ವಿದ್ವಾಂಸನವರೆಗೂ ಹರಡಿರುತ್ತದೆ.

ಗೀತೆಯು 'ಸಮದರ್ಶನ'ದ ಆಕಾಂಕ್ಷೆಯನ್ನು ಎತ್ತಿಹಿಡಿಯುತ್ತದೆ. ನಾವು ಗೀತೆಯ ಮಾತನ್ನು ಆಲಿಸುವ ಮೊದಲು, ಶ್ರೀರಮಣ ಮಹರ್ಷಿಗಳ 'ಸಂತಚರಿತ್ರೆ'ಯಲ್ಲಿ ಬರುವ ಒಂದು ಮರ್ಮಸ್ಪರ್ಶಿಯಾದ ಘಟನೆಯನ್ನು ಇದೀಗ ಮೆಲುಕು ಹಾಕೋಣ. ಈ ಘಟನೆ ನಡೆದದ್ದು 1.4.1937ರಂದು. ಬೆಳಗಿನ ಪ್ರಾತಃಕಾಲ. ಆಗ ಸುಮಾರು ಒಂಬತ್ತು ಗಂಟೆ. ಧ್ಯಾನಮಂದಿರದಲ್ಲಿ ನೂರಾರು ಜನ ಸೇರಿದ್ದಾರೆ. ಅವರೆಲ್ಲರೂ ಧ್ಯಾನದಲ್ಲಿ ಮಗ್ನರಾಗಿದ್ದಾರೆ. ಶ್ರೀರಮಣರು ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡು ಸಹಜಾನಂದದಲ್ಲಿ ಮುಳುಗಿದ್ದಾರೆ. ಅಲ್ಲಿ–ಇಲ್ಲಿ ಕೆಲವರು ಶ್ರೀರಮಣರ ಸನ್ನಿಧಿಯಲ್ಲಿ ಧ್ಯಾನಾಭ್ಯಾಸ ಮಾಡಬೇಕೆಂದು ತವಕಿಸುತ್ತಿದ್ದಾರೆ. ಅನೇಕರು ಆಗಾಗ್ಗೆ ಶ್ರೀರಮಣರತ್ತ ನೋಡುತ್ತಿದ್ದಾರೆ. ಶ್ರೀರಮಣರು ಯೋಗನಿಷ್ಠಾಸ್ಥಿತಿಯಲ್ಲಿದ್ದಾರೆ.

ಭಕ್ತರಿಗೆ ಅವರನ್ನು ನೋಡುವುದರಲ್ಲಿಯೇ ಒಂದು ಅಧ್ಯಾತ್ಮಸುಖ. ಅವರದು ಆತ್ಮಾರಾಮ ಸ್ಥಿತಿ. ಆಗ ಹಾಲಿನಲ್ಲಿದ್ದ ಒಬ್ಬ ವೃದ್ಧ ಬ್ರಾಹ್ಮಣ ಕಣ್ಣು ಮುಚ್ಚಿಕೊಂಡು ಧ್ಯಾನಾಸಕ್ತನಾಗಿದ್ದ. ಆತನು ಏಕಾಏಕಿ ಎದ್ದು ನಿಂತುಕೊಂಡ. ಶ್ರೀರಮಣರು ಕುಳಿತಿದ್ದ ಕಡೆ ಹೊರಟ. ಆ ವೃದ್ಧ, ಒಂದು ಅಂಚಿನ ಪಂಚೆಯನ್ನು ಉಟ್ಟು, ಅಂಗವಸ್ತ್ರವನ್ನು ಹೊದ್ದುಕೊಂಡಿದ್ದ. ಆತನ ಎಡಗೈ ಬೆರಳುಗಳಲ್ಲಿ ವಜ್ರದ ಉಂಗುರಗಳು ಥಳಥಳಿಸುತ್ತಿದ್ದವು. ಬಲಗೈ ಬೆರಳುಗಳಲ್ಲೂ ವಜ್ರದ ಉಂಗುರಗಳು ರಾರಾಜಿಸುತ್ತಿದ್ದವು. ಕೊರಳಲ್ಲಿ ಬಂಗಾರದ ರುದ್ರಾಕ್ಷಿಸರ ಧರಿಸಿದ್ದಲ್ಲದೆ, ಕಿವಿಗಳಲ್ಲಿ ವಜ್ರದ ಓಲೆಗಳು ಕೋರೈಸುತ್ತಿದ್ದುವು. ಆತನ ಹಣೆ, ವಿಶಾಲವಾಗಿದ್ದು ವಿಭೂತಿ ಮತ್ತು ದೊಡ್ಡ ಕುಂಕುಮದಿಂದ ವಿರಾಜಮಾನವಾಗಿತ್ತು. ಆತ ದೃಢಕಾಯನೂ ಆಗಿದ್ದ. ಅವನು ಶ್ರೀರಮಣರ ಬಳಿ ಸ್ವಲ್ಪ ಹೊತ್ತು ತದೇಕದೃಷ್ಟಿಯಿಂದ ನೋಡುತ್ತಿದ್ದ. ಅಲ್ಲಿದ್ದ ಭಕ್ತರು ಕುತೂಹಲಾವಿಷ್ಟರಾಗಿ ಆ ವೃದ್ಧನ ಕ್ರಿಯೆಗಳನ್ನು ಗಮನಿಸುತ್ತಿದ್ದರು. ಅವನು ತೆಲುಗುನಾಡಿನಿಂದ ಬಂದ ವಿದ್ವಾಂಸನಾಗಿದ್ದ. ಆತ ಶ್ರೀರಮಣರನ್ನು ಕುರಿತು, 'ಸ್ವಾಮಿ, ಇಲ್ಲಿ ಸ್ತ್ರೀ–ಪುರುಷರು ನೆರೆದಿದ್ದಾರೆ. ಅವರು ತಮ್ಮಿಂದ ಜ್ಞಾನೋಪದೇಶ ಪಡೆಯಬೇಕೆಂದಿದ್ದಾರೆ. ನೀವಾದರೋ ಒಂದು ಮಾತನ್ನು ಆಡುತ್ತಿಲ್ಲ. ಈ ಸ್ಥಿತಿಯಲ್ಲಿ ಭಕ್ತರಿಗೆ ನೀವು ಏನನ್ನು ಕೊಡುತ್ತೀರಿ. ಭಕ್ತರು ಏನನ್ನು ಕಲಿಯುತ್ತಾರೆ? ಈ ಪ್ರಶ್ನೆಗಳಿಗೆ ಉತ್ತರ ಕೊಡಿ' ಎಂದು ಹೇಳುತ್ತ ಸ್ವಲ್ಪ ಹೊತ್ತು ಕಾದ. ಆದರೆ, ಶ್ರೀ ರಮಣರು ಸ್ವಲ್ಪವೂ ಅಲುಗಾಡಲಿಲ್ಲ. ಅವರು ತಮ್ಮ ಕಣ್ಣುಗಳನ್ನು ಅತ್ತಿತ್ತ ಚಲಿಸಲಿಲ್ಲ. ಆ ವೃದ್ಧನ ಮಾತು ಕೇಳಿಸಿತೋ ಇಲ್ಲವೋ ಎಂಬ ಸಂದೇಹ ಬರುವಂತೆ ಶ್ರೀರಮಣರು ಕುಳಿತಿದ್ದರು. ಆಗ ವೃದ್ಧಪಂಡಿತ ಮತ್ತೊಮ್ಮೆ 'ಸ್ವಾಮಿ ನನ್ನ ಎರಡು ಪ್ರಶ್ನೆಗಳಿಗೆ ನೀವು ಉತ್ತರಕೊಡಲಿಲ್ಲ. ನಾನು ಎಷ್ಟು ಯೋಚಿಸಿದರೂ ನನ್ನ ಮನಸ್ಸಿಗೆ ಹೊಳೆಯುತ್ತಿಲ್ಲ. ತಾವು ಕೃಪೆಮಾಡಿ ಸಂದೇಹವನ್ನು ನಿವಾರಣೆ ಮಾಡಿ' ಎಂದು ಪ್ರಾರ್ಥನೆ ಮಾಡಿಕೊಂಡು ಆ ವೃದ್ಧಪಂಡಿತ ಹಾಗೆಯೇ ನಿಂತಿದ್ದ. ಆಗ ಶ್ರೀರಮಣರು ತಮ್ಮ ಕಣ್ಣುಗಳನ್ನು ತೆರೆದು ಆತನನ್ನು ನೋಡಿ ತೆಲುಗುಭಾಷೆಯಲ್ಲಿ, 'ನೀವು ನನ್ನನ್ನು ಕೇಳುವುದೇನು? ಇತರರಿಗೆ ಹೇಳಿಕೊಡುವ ಒಬ್ಬ ವ್ಯಕ್ತಿಯು 'ಇಲ್ಲಿ' ಇರುತ್ತಾನೆಯೆ?' ಎಂದರು. ಆಗ ಆ ವೃದ್ಧನು 'ಹಾಗಾದರೆ ಇಷ್ಟು ಮಂದಿ ಸ್ತ್ರೀ–ಪುರುಷರು ಶಾಂತಚಿತ್ತರಾಗಿ ತಮ್ಮ ಸನ್ನಿಧಿಯಲ್ಲಿ ಏಕೆ ಕುಳಿತಿದ್ದಾರೆ? ಅವರಿಗಾದ ಪ್ರಯೋಜನ ಏನು?' ಎಂದು ಮರುಪ್ರಶ್ನೆಯನ್ನು ಹಾಕಿದ.

ಆಗ ಶ್ರೀರಮಣರು ಅಪೂರ್ವವಾದ ಮಾತುಗಳನ್ನು ಸ್ಪಷ್ಟವಾಗಿ ಆಡಿದರು. 'ನಿಮ್ಮ ಪ್ರಶ್ನೆಯನ್ನು ನೀವು 'ಅಲ್ಲಿ' ಹಾಕಿರಿ. ಪ್ರಶ್ನೆಯನ್ನು 'ಇಲ್ಲಿ' ಏಕೆ ಕೇಳುವಿರಿ?' ಎಂದು ಉಚ್ಚಸ್ವರದಲ್ಲಿ ನುಡಿದುಬಿಟ್ಟರು. ಶ್ರೀರಮಣರು 'ಅಲ್ಲಿ' ಎಂದಾಗ ಭಕ್ತರ ಗುಂಪನ್ನು ಸಂಕೇತದಿಂದ ತೋರಿಸಿದರು. 'ಇಲ್ಲಿ' ಎಂದಾಗ ತಮ್ಮ ಶರೀರದ ಕಡೆಗೆ ಬಲಗೈಯನ್ನು ತಿರುಗಿಸಿಕೊಂಡರು.

ವೃದ್ಧಪಂಡಿತರು ಶ್ರೀರಮಣರ ಮಾತನ್ನು ಕೇಳಿ ಹೌಹಾರಿದರು. ಹೋಗಿ ಸುಮ್ಮನೆ ಕುಳಿತುಕೊಂಡರು. ಅವರು ಮಾಡಿದ 'ಅಲ್ಲಿ' ಮತ್ತು 'ಇಲ್ಲಿ' ಎಂಬ ಸಂಜ್ಞೆಗಳ ರಹಸ್ಯ, ಭಕ್ತರಿಗೆ ತುಸು ಬೋಧೆಯಾಯಿತು. ಶ್ರೀರಮಣರು 'ಬ್ರಹ್ಮಭಾವ'ದಲ್ಲಿಯೇ ಇದ್ದುದರಿಂದ ಅವರೊಬ್ಬ 'ಗುರು' ಎಂಬ ಭಾವನೆ ಅವರಿಗೆ ಇರಲಿಲ್ಲ. ಇನ್ನು ಭಕ್ತರು ಜ್ಞಾನರಹಿತರೆಂದು ರಮಣರು ಎಂದೂ ಭಾವಿಸಿರಲಿಲ್ಲ. ಶ್ರೀರಮಣರ ದೃಷ್ಟಿಯಲ್ಲಿ ಎಲ್ಲರೂ 'ಬ್ರಹ್ಮ'ರೇ ಆಗಿದ್ದರು. ಅವರು ಅಖಂಡಾತ್ಮ ಸಿದ್ಧಸ್ಥಿತಿಯಲ್ಲಿ ಇದ್ದರು. ಅವರು 'ಸಮದರ್ಶನ'ದಲ್ಲಿ ನೆಲೆಗೊಂಡಿದ್ದರು. ಇದು ಶ್ರೀರಮಣರ 'ಸಮದರ್ಶನ'ದ ಸ್ಥಿತಿ. ಈಗ ಭಗವದ್ಗೀತೆಗೆ ಬರೋಣ. ಬ್ರಹ್ಮವಿದರಿಗೆ ಸರ್ವತ್ರವೂ ಬ್ರಹ್ಮದೃಷ್ಟಿಯೇ ಇರುತ್ತದೆ. ಇಲ್ಲಿ ಖಂಡಜ್ಞಾನಕ್ಕೆ ಅವಕಾಶವೇ ಇಲ್ಲ. ಗೀತೆಯ ಮಾತಿದು:

ಸರ್ವಭೂತಸ್ಥಮಾತ್ಮಾನಂ ಸರ್ವಭೂತಾನಿ ಚಾತ್ಮನಿ
ಈಕ್ಷತೇ ಯೋಗಯುಕ್ತಾತ್ಮಾ ಸರ್ವತ್ರ ಸಮದರ್ಶನಃ

ಯೋಗಯುಕ್ತಾತ್ಮನು ಎಲ್ಲೆಲ್ಲಿಯೂ ಸಮದರ್ಶಿಯಾಗಿರುತ್ತಾನೆ. ಅವನು ಆತ್ಮನನ್ನು ಸರ್ವಭೂತಗಳಲ್ಲಿಯೂ ಸರ್ವಭೂತಗಳನ್ನು ಆತ್ಮನಲ್ಲಿಯೂ ಕಾಣುತ್ತಿರುತ್ತಾನೆ. ಇದು ಭಗವದ್ಗೀತೆಯು ಹೇಳಿದ ಶ್ರೀರಮಣರಿದ್ದ ಸಿದ್ಧಸ್ಥಿತಿ. ಇಲ್ಲಿ 'ಸಮದರ್ಶನ' ಶ್ರೀರಮಣರಿಗೆ ಸಾಧ್ಯವಾಗಿದೆ. ಅವರದ್ದು ಅಖಂಡಭಾವದ ಬ್ರಹ್ಮಸ್ಥಿತಿ. ಶ್ರೀರಮಣರು ಮಾತನ್ನು ಹೆಚ್ಚು ಬಳಸುತ್ತಿರಲಿಲ್ಲವೆಂಬುದನ್ನು ನಾವು ಗಮನಿಸಬೇಕು. ಅಗತ್ಯವಿದ್ದಾಗ ಮಾತ್ರ ಸಾರವತ್ತಾದ ಮಾರ್ಮಿಕವಾದ ಮಾತುಗಳನ್ನು ಅವರು ಆಡುತ್ತಿದ್ದರು. ಅವರು ಎಲ್ಲ ಬಗೆಯ ಭೇದಗಳನ್ನು ಮೀರಿದ್ದರು. ಇದು ಪ್ರತಿಯೊಬ್ಬ ವ್ಯಕ್ತಿಯ ಕ್ರಮಶಃ ಸಾಧನೆ ಆಗಬೇಕಾಗಿದೆ. ಆಗ ಬಾಳ್ವೆಗೆ ಸಮದರ್ಶೀಗುಣ ಪ್ರಾಪ್ತವಾಗುತ್ತದೆ. ಅದು ಆಗಬೇಕೆಂಬುದೇ ಭಾರತೀಯ ವೇದಾಂತದ ಆಕಾಂಕ್ಷೆ.

■ **ಪುರಂಜೀವಿ**

## ಮಾತೇ ಮುತ್ತು

- ಕೆಲವರಿಗೆ ಯಶಸ್ಸು ಸಿಕ್ಕುತ್ತದೆ. ಆದರೆ ಅದಕ್ಕೆ ಪಾತ್ರರು ಬೇರೆಯವರು ಆಗಿರುತ್ತಾರೆ.
  —ಅ.ನ. ಕೃಷ್ಣರಾವ್
- ಬೇರೆಯವರನ್ನು ತೆಗಳುವುದರಿಂದ ನಿಮ್ಮ ವ್ಯಕ್ತಿತ್ವಕ್ಕೇ ಹೆಚ್ಚು ಕುಂದುಂಟಾಗುತ್ತದೆ.
  —ಶಿವರಾಮ ಕಾರಂತ
- ಅಹಂಕಾರಿ ಮನುಷ್ಯ ಒಂಟಿಯಾಗಿರಬೇಕಾಗುತ್ತದೆ.
  —ಚೆನ್ನವೀರ ಕಣವಿ
- ಸಾರ್ವಜನಿಕ ಬದುಕಿನಲ್ಲಿ ತೊಡಗಿರುವ ಪ್ರತಿಯೊಬ್ಬರೂ ಟೀಕೆ, ವಿಮರ್ಶೆ, ತಮಾಷೆಯನ್ನು ಎದುರಿಸಲು ಸಿದ್ಧರಾಗಿರಬೇಕು.
  —ಪಿ. ಲಂಕೇಶ್
- ಭಾರತಿದೇವಿಯು ವಿಶ್ವದ ಉತ್ಸವಮೂರ್ತಿಯು, ಕರ್ನಾಟಕ ದೇವಿಯು ಭಾರತಿದೇವಿಯ ಉತ್ಸವಮೂರ್ತಿಯು.
  —ಆಲೂರು ವೆಂಕಟರಾಯರು
- ಅರ್ಥವಿಲ್ಲದ ಪ್ರಶ್ನೆಗೆ ಸುಮ್ಮನಿರುವುದೇ ಉತ್ತರ.
  —ಕುವೆಂಪು
- ಯಾವುದಿಹವೋ, ಬಂಧನವೋ, ಭ್ರಾಂತಿಯೋ ಅದಾಗಲಿ ನನ್ನ ನೆಲೆ
  —ಕೆ.ಎಸ್. ನರಸಿಂಹ ಸ್ವಾಮಿ
- ತಾಂತ್ರಿಕ ಶಿಕ್ಷಣ ಬದುಕಿಗಾಗಿ – ಆಧ್ಯಾತ್ಮಿಕ ಶಿಕ್ಷಣ ಬಾಳಿಗಾಗಿ.
  —ದ.ರಾ. ಬೇಂದ್ರೆ